ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2121/2019

ಚಾಸಾ:5 ಪ್ರಾಸಾ:4

ದಿನಾಂಕ: 02.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಜ್ಯೋತಿ |
| ಗಂಡನ ಹೆಸರು | : | ಗಣಪತಿ ವರ್ಷ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಆಶಾ ಕಾರ್ಯಕರ್ತೆ |
| ವಾಸ ಸ್ಥಳ | : | ಬೆಳ್ವೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಚಾಸಾ-1 ನನ್ನ ಅಣ್ಣ. ಚಾಸಾ-2 ನನ್ನ ತಾಯಿ. ದಿ: 28-05-2019 ರಂದು ಆರೋಪಿತರು ಮನೆಗೆ ಬಂದು ಜಾಕ್ ಮತ್ತು ಕಟ್ಟಿಗೆಯಿಂದ ಹಲ್ಲೆ ಮಾಡಿರುವುದಾಗಿ ಹೇಳಿ ಚಾಸಾ-1ರವರು ಪೋನ್ ಮಾಡಿ ತಿಳಿಸಿರುತ್ತಾರೆ. ಚಾಸಾ-1ರವರ ತಲೆಯ ಭಾಗಕ್ಕೆ ಗಾಯವಾಗಿದ್ದು 6 ಹೊಲಿಗೆ ಹಾಕಿರುತ್ತಾರೆ. ಚಾಸಾ-2ರವರ ಮುಖದ ಮೇಲೆ ಹೊಡೆದಿರುತ್ತಾರೆ. ಮರುದಿನ ನಾನು ಮತ್ತು ಚಾಸಾ-6ರವರು ಆಸ್ಪತ್ರೆಗೆ ಬಂದು ಅವರಿಬ್ಬರನ್ನು ನೋಡಿರುತ್ತೇನೆ. ಅಲ್ಲಿ ಘಟನೆಯ ಬಗ್ಗೆ ವಿಚಾರಿಸಿದಾಗ ಅಶೋಕ ಶೆಟ್ಟಿರವರ ಮಗುವಿನ ಹುಟ್ಟಿದ ಹಬ್ಬಕ್ಕಾಗಿ ಹೋಗಿದ್ದಾಗ ಅಲ್ಲಿ 1 ಮತ್ತು 2ನೇ ಆರೋಪಿತರು ಸಿಕ್ಕಿದ್ದು ಒಟ್ಟಿಗೆ ಹೋಗುತ್ತೀರಾ ಎಂದು ಪ್ರಶ್ನಿಸಿದಾಗ ಚಾಸಾ-1 ಮತ್ತು 1ನೇ ಆರೋಪಿಯ ನಡುವೆ ಮಾತುಕತೆ ಬೆಳೆದು, ಆ ಹಿನ್ನೆಲೆಯಲ್ಲಿ ಟಿ.ವಿ ನೋಡುತ್ತಿದ್ದಾಗ ಆರೋಪಿತರು ಮನೆಗೆ ಬಂದು ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಈ ಕುರಿತಾಗಿ ನಾನು ಪೊಲೀಸರಿಗೆ ದಿ: 31-05-2019 ರಂದು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಹೆಚ್ ಆರ್ ಎಸ್ ರವರಿಂದ:**

ನನಗೆ ಎಲ್ಲಾ ಆರೋಪಿತರ ಪರಿಚಯವಿಲ್ಲ. ಈಗ 14 ವರ್ಷಗಳಿಂದ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ. ಚಾಸಾ-1ರವರು ಸ್ವತಹ ನನಗೆ ಕರೆ ಮಾಡಿರುತ್ತಾರೆ. ಆಗ ಆತ

ಮನೆಯಲ್ಲಿಯೇ ಇದ್ದ. ಚಾಸಾ-1ರವರು ಹೇಳಿದ್ದನ್ನು ಬಿಟ್ಟು ಘಟನೆಯ ಬಗ್ಗೆ ಬೇರೆ ಯಾವುದೇ ಮಾಹಿತಿ ಇಲ್ಲ. ಚಾಸಾ-1ರವರು ಹೇಳಿದ ಮೇರೆಗೆ ತಿಳಿದು ಬಂದಿರುತ್ತದೆ. ಗಂಗೊಳ್ಳಿ ಠಾಣೆಯಲ್ಲಿ ಪೊಲೀಸರು ಹೇಳಿಕೆ ಪಡೆದ ನಂತರ ನಾನು ಸಹಿ ಮಾಡಿರುತ್ತೇನೆ. ಪೊಲೀಸರು ಪಡೆದ ಹೇಳಿಕೆಯಲ್ಲಿ ನನ್ನ ಸಹಿ ಇರುತ್ತದೆ. ಮರುದಿನ ಆಸ್ಪತ್ರೆಗೆ ಹೋಗಿರುತ್ತೇವೆ. ನ್ಯಾಯಾಲಯದ ಮುಂದೆ ಪೊಲೀಸರು ಹಾಜರುಪಡಿಸಿರುವ ನನ್ನ ಹೇಳಿಕೆಯಲ್ಲಿ ಸಹಿ ಕಂಡು ಬರುವುದಿಲ್ಲ ಎಂದರೆ ಸರಿ.

ನಾನು ಠಾಣೆಗೆ ಹೋಗಿ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಆ ವೇಳೆಯಲ್ಲಿ ಯಾವುದೇ ಸಹಿಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1, 2 ಮತ್ತು ಕುಟುಂಬಸ್ಥರು ಸೇರಿ ಆರೋಪಿತರ ವಿರುದ್ದ ಪೊಲೀಸರ ಮೇಲೆ ಒತ್ತಡ ಹೇರಿ ಪ್ರಕರಣ ದಾಖಲಾಗುವಂತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-1ರವರು ಸುಳ್ಳು ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**